ಕರ್ನಾಟಕ ವಿಧಾನಸಭೆ
ಗುರುವಾರ 20ನೇ ಜನವರಿ 2005 ರಂದು
ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 55 ನಿಮಿಷಕ್ಕೆ ಪ್ರಾರಂಭವಾಯಿತು.

1) ಸನ್ಮಾನ್ಯ ರಾಜ್ಯಪಾಲರ ಆಗಮನ

ಘನತೆವೆತ್ತ ರಾಜ್ಯಪಾಲರು ಬೆಳಿಗ್ಗೆ 10–55 ಗಂಟೆಗೆ ವಿಧಾನಸೌಧದ ಮಹಾದ್ವಾರದ ಬೃಹತ್ ಮೆಟ್ಟಿಲುಗಳ ಬಳಿಗೆ ಆಗಮಿಸಿದರು. ಸನ್ಮಾನ್ಯ ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಸಭಾಧ್ಯಕ್ಷರು, ಮಾನ್ಯ ಸಭಾಪತಿಯವರು ಮತ್ತು ವಿಧಾನಸಭೆಯ ಕಾರ್ಯದರ್ಶಿಯವರು ಹಾಗೂ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು (ಪ್ರಭಾರ) ಸ್ವಾಗತಿಸಿ, ಮಹಾದ್ವಾರದ ಬಳಿ ಕರೆದುಕೊಂಡು ಬಂದರು. ಅಲ್ಲಿ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು,

ಶ್ರೀ ಟಿ. ರಾಜಣ್ಣ ವಿಧಾನಸಭೆಯ ಕಾರ್ಯದರ್ಶಿ	ಶ್ರೀ ಕೆ. ಜಯಶಂಕರಮೂರ್ತಿ ವಿಧಾನ ಪರಿಷತ್ತಿನ ಕಾರ್ಯದರ್ಶಿ (ಪ್ರಭಾರ)
ಶೀ ಕೃಷ್ಣ ಮಾನ್ಯ ಸಭಾಧ್ಯಕ್ಷರು	ಶ್ರೀ ವಿ.ಆರ್. ಸುದರ್ಶನ್ ಮಾನ್ಯ ಸಭಾಪತಿಯವರು

ಸನ್ಮಾನ್ಯ ಶ್ರೀ ಟಿ.ಎನ್. ಚತುರ್ವೇದಿ
ರಾಜ್ಯಪಾಲರು

ಶ್ರೀ ಎನ್. ಧರ್ಮಸಿಂಗ್ ಮಾನ್ಯ ಮುಖ್ಯಮಂತ್ರಿಗಳು	ಶ್ರೀ ಹೆಚ್.ಕೆ. ಪಾಟೀಲ್ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಎ.ಡಿ.ಸಿ.

ಈ ರೀತಿ ಮೆರವಣಿಗೆಯು ವಿಧಾನಸಭಾ ಸಭಾಂಗಣದ ಕಡೆಗೆ ಆಗಮಿಸಿತು. ಸಭಾಸದನದ ದ್ವಾರದ ಬಳಿ ಮೆರವಣಿಗೆ ಬಂದಕೂಡಲೇ ಸನ್ಮಾನ್ಯ ರಾಜ್ಯಪಾಲರ ಆಗಮನವನ್ನು ಮಾರ್ಶಲ್‌ರವರು ಸಭೆಗೆ ತಿಳಿಸಿದರು ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ಸನ್ಮಾನ್ಯ ರಾಜ್ಯಪಾಲರು ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವತನಕ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತುಕೊಂಡಿದ್ದರು.

ಸಭಾಸದನದ ವೇದಿಕೆಯ ಮುಂದೆ ಬಂದು ಬಳಿಕ ಮೆರವಣಿಗೆಯು ಎರಡು ಭಾಗವಾಗಿ ಬೇರ್ಪಟ್ಟಿತು. ವೇದಿಕೆ ಮೇಲೆ ಮಾನ್ಯ ಅಧ್ಯಕ್ಷರು ಸನ್ಮಾನ್ಯ ರಾಜ್ಯಪಾಲರ ಬಲಭಾಗದಲ್ಲಿಯೂ,

ಮಾನ್ಯ ಸಭಾಪತಿಯವರು ಸನ್ಮಾನ್ಯ ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತುಕೊಂಡರು. ಸನ್ಮಾನ್ಯ ರಾಜ್ಯಪಾಲರು ವೇದಿಕೆಯ ಮಧ್ಯಭಾಗದ ಆಸನದಲ್ಲಿ ಕುಳಿತುಕೊಂಡರು. ಉಭಯ ಸದನಗಳ ಕಾರ್ಯದರ್ಶಿಗಳು ವೇದಿಕೆಯ ಮುಂದಿರುವ ಆಸನದಲ್ಲಿ ಕುಳಿತುಕೊಂಡರು.

2. ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣ.

ಘ ನತೆವೆತ್ತ ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿಯವರು ಕರ್ನಾಟಕ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸಂಯುಕ್ತ ಅಧಿವೇಶನವನ್ನುದ್ದೇಶಿಸಿ ವಿಧಾನಸಭೆಯ ಸಭಾಂಗಣದಲ್ಲಿ ದಿನಾಂಕ 20ನೇ ಜನವರಿ 2005ರ ಗುರುವಾರದಂದು ಬೆಳಿಗ್ಗೆ 11–00 ಗಂಟೆಗೆ ಮಾಡಿದ ಭಾಷಣ.

ಗೌರವಾನ್ವಿತ ರಾಜ್ಯಪಾಲರು: ಸನ್ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಸಭಾಧ್ಯಕ್ಷರೆ, ಹಾಗೂ ಸನ್ಮಾನ್ಯ ಸದಸ್ಯರೆ,

ರಾಜ್ಯ ವಿಧಾನ ಮಂಡಲದ ಜಂಟಿ ಅಧಿವೇಶನಕ್ಕೆ ನಿಮ್ಮೆಲ್ಲರನ್ನೂ ಸ್ವಾಗತಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ. ವಿಧಾನಸಭೆಯ.....

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): .....

*****

ಗೌರವಾನ್ವಿತ ರಾಜ್ಯಪಾಲರು: ವಿಧಾನ ಸಭೆಯ 50ನೇ ವರ್ಷವನ್ನು ನಾವು ಪ್ರಾರಂಭಿಸುತ್ತಿದ್ದೇವೆ. ಹೊಸ ವರ್ಷದ ಪ್ರಾರಂಭವು ಹೊಸ ನಿರೀಕ್ಷೆಗಳಿಗೆ ಹಾಗೂ ರಾಜ್ಯದ ಪುನರ್ ನಿರ್ಮಾಣಕ್ಕೆ ಸಕಾಲವಾಗಿದೆ. ಮುಂದೆ ಎದುರಾಗಲಿರುವ ಸವಾಲುಗಳನ್ನು ಎದುರಿಸಲು ನನ್ನ ಸರ್ಕಾರವು ಸ್ವತ: ಸಜ್ಜಾಗಿದೆ, ಕಳೆದ ಆರು ತಿಂಗಳಲ್ಲಿ ಹಲವಾರು ಘಟನಾವಳಿಗಳು ಸಂಭವಿಸಿವೆ ಹಾಗೂ ಪ್ರಕೃತಿಯು ನಮ್ಮ ರಾಜ್ಯದ ಮೇಲೆ ಸ್ವಲ್ಪ ಮಟ್ಟಿಗೆ ಕರುಣೆ ತೋರಿದೆ, ಬಿದ್ದ ಮಳೆ ನಮ್ಮ ಅಸಂಖ್ಯಾತ ಗ್ರಾಮೀಣ ಸೋದರ ಸೋದರಿಯರ ಬದುಕನ್ನು ಸುಧಾರಣೆ ಮಾಡುವ ಭರವಸೆಯನ್ನು ಮೂಡಿಸಿದೆ. ಮತ್ತು ನಮ್ಮ ಗ್ರಾಮೀಣ ಸಮುದಾಯಕ್ಕೆ ಸಮೃದ್ಧಿ ತರುವ ಭರವಸೆಯೊಂದಿಗೆ ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ. ಉತ್ತಮ ಆಡಳಿತಕ್ಕೆ ಇರುವ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಈಗ ಸನ್ನದ್ಧವಾಗಿದೆ. ಕರ್ನಾಟಕ ರಾಜ್ಯದ ಜನರ ಕಲ್ಯಾಣ ಹಾಗೂ ಏಳಿಗೆಯನ್ನು ಖಚಿತಪಡಿಸುವಂಥ ಒಂದು ಕಾರ್ಯಸೂಚಿಯನ್ನು ರೂಪಿಸಲಾಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: .....*****

His Excellency the Governor: 2. Preservation of peace and tranquility is essential for the economic resurgence of Karnataka....

ಶ್ರೀ ವಾಟಾಳ್ ನಾಗರಾಜ್ : (ಚಾಮರಾಜನಗರ) .....*****

***** ಮಾನ್ಯ ವಿರೋಧ ಪಕ್ಷದ ನಾಯಕರ ಭಾಷಣವನ್ನು ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.